

ತೀಕ್ಷ್ಣವಾಗುತ್ತದೆ. ಶ್ರದ್ಧೆ ಬೆಳೆಯುತ್ತದೆ ಅಲ್ಲದೆ ಗುರುತಿಸುವಿಕೆ ಉಂಟಾಗುತ್ತದೆ. ಮಕ್ಕಳಿಗೆ ಹಾಕುವ ಬಟ್ಟೆಗಳು, ಹೊದೆಯುವ ಹೊದಿಕೆಗಳು ಬಣ್ಣ ಬಣ್ಣದ್ದಾಗಿರಬೇಕಾಗುವುದು ಗಮನಿಸ ಬೇಕಾದ ವಿಷಯ. ಅಲ್ಲದೆ ಈ ಕೊಟ್ಟು ತಿರುಗುವ ಆಟಿಕೆ ಕಣ್ಣಂಚಿನಲ್ಲಿ ಇದ್ದರೆ ಮಕ್ಕಳು ಅದನ್ನು ಹಿಡಿಯಲು ಪ್ರಯತ್ನಿಸುತ್ತಾರೆ. ಆಗ ಕೈ ಕಾಲುಗಳಿಗೆ ವ್ಯಾಯಾಮವಾಗುತ್ತದೆ. ಹೀಗೆ ಬೆಳೆದು ಬಂದ ಮಗುವಿಗೆ ಹೊಸ ಆಟ ಹೇಗೆ ಪ್ರಾರಂಭಿಸಬೇಕು.

### ನೀರಿನಲ್ಲಿ ಆಟ

ನಾವು ಟಬ್‌ನಲ್ಲಿ ಕೈಯನ್ನು ಬಡಿಯುತ್ತಾ ನೀರು ಮುಖಕ್ಕೆ ಹಾರುವಂತೆ ಮಾಡಬೇಕು. ಈ ಆಟ ಮಕ್ಕಳಿಗೆ ಬಹಳ ಖುಷಿ ಕೊಡುತ್ತದೆ. ಎರಡು ಕಪ್ ಕೊಟ್ಟು ಬ್ರಷ್ ಅನ್ನು ನೀರಿಗೆ ಹಾಕಿ, ಅದರಿಂದ ತೊಟ್ಟು ತೊಟ್ಟಾಗಿ ನೀರು ಹರಿಯುವುದನ್ನು ನೋಡುತ್ತಾ ಖುಷಿ ಪಡುತ್ತಾರೆ. ಆಟದ ವಸ್ತುಗಳನ್ನು ಟಬ್‌ನ ಒಳಗೂ ಹೊರಗೂ ಹಾಕಿ ತೆಗೆಯುವ ಆಟವನ್ನು ಆಡುವಂತಹ ವಸ್ತುಗಳನ್ನು ನೀಡಬೇಕು.

### ರೈಲಿನ ಆಟ

ಟಬ್‌ನಲ್ಲಿ ಇರುವ ಹಳೆಯ ಆಟದ ಸಾಮಾನಾದರೂ ಸರಿ, ತೊಂಡೆಕಾಯಿ ಬೆಂಡೆಕಾಯಿ ಆದರೂ ಸರಿ. ಒಂದರ ಹಿಂದೆ ಒಂದು ಜೋಡಿಸುತ್ತಾ ಹೋಗಬೇಕು. ಮಕ್ಕಳಿಗೆ ಅದು ಎಷ್ಟು ಉದ್ದವಾಗುತ್ತೋ ಅಷ್ಟು ಖುಷಿ. ರೂಮಿನ ಈ ತುದಿಯಿಂದ ಆ ತುದಿಯವರೆಗೂ ಜೋಡಿಸಿ ಸಂತಸ ಪಡುತ್ತಾರೆ.

### ಚೆಂಡಾಟ

ಮನೆಯ ಒಳಗೆ ಚೆಂಡು ಗೋಡೆಗೆ ಎಸೆದು ಪುನಃ ಬರುವಾಗ ಹಿಡಿಯುವುದು. ಚಿಕ್ಕ ಎರಡು ಬ್ಯಾಟ್ ಹಿಡಿದು ಕುಟ್ಟುವುದು, ಹೀಗೆ ಚೆಂಡಿನಲ್ಲೇ ಎಷ್ಟೊಂದು ಆಟ ನೋಡಿ. ಇದು ಮಕ್ಕಳಿಗೆ ಖುಷಿ ಕೊಡುತ್ತದೆ. (ಮೂರು ಜನ ಇದ್ದರೆ ಮಂಗಣ್ಣ ಆಟ ಆಡಬಹುದು. ಮಧ್ಯದಲ್ಲಿರುವವರು ಬಾಲ್ ಹಿಡಿಯಬೇಕು. ಉಳಿದಿಬ್ಬರು ಬಾಲ್ ಎಸೆಯುತ್ತಾ ಇರುವಾಗ, ಯಾರು ಬಾಲ್ ಎಸೆಯುವಾಗ ಮಧ್ಯದಲ್ಲಿರುವವನು ಹಿಡಿದರೋ ಪುನಃ ಅವರು ಮಧ್ಯಕ್ಕೆ ಬರಬೇಕು.

### ಬಿಲ್ಡಿಂಗ್ ಬ್ಲಾಕ್ಸ್

ಎಲ್ಲಾ ರೀತಿಯ ಆಟದ ಕಟ್ಟಡಗಳನ್ನು ಕಟ್ಟುವ ಸಾಮಾನು ದುಡ್ಡು ಕೊಟ್ಟರೆ ಮಾರುಕಟ್ಟೆಯಲ್ಲಿ ಲಭ್ಯವಿದೆ. ಆದರೆ ಇದಕ್ಕೆ ಹಣ ಕೊಟ್ಟೇ ತರಬೇಕೆಂದಿಲ್ಲ. ಮನೆಯಲ್ಲೇ ಇರುವ ಗ್ಲಾಸುಗಳಾಗಿರಬಹುದು, ಪುಸ್ತಕ ಆಗಿರಬಹುದು, ಹಣ್ಣುಗಳಾಗಿರಬಹುದು.. ಹೀಗೆ ವಸ್ತುಗಳನ್ನು ಸೇರಿಸಿ ಸೇರಿಸಿ ಕಟ್ಟಬಹುದು! ಅದು ಮಕ್ಕಳಿಗೆ ಜ್ಞಾನ ಹೆಚ್ಚಿಸುತ್ತದೆ ಅಂದರೆ ಸೃಜನಾತ್ಮಕ ಚಿಂತನೆಗೆ ಅವಕಾಶ ನೀಡುತ್ತದೆ.

ಕೈ ಬೆರಳಲ್ಲಿ ಆಟ. ಈ ಆಟಕ್ಕೆ ಹಲವಾರು ಹಾಡುಗಳಿವೆ. ಪುಟ್ಟ ಮಕ್ಕಳು ಕೈಗಳನ್ನು ಮೇಲೆ ಮೇಲೆ ಇಟ್ಟು ಹಾಡು ಹಾಡುತ್ತಾ ಆಡುವ ಆಟ ಸಾಕಷ್ಟು ಮುದ ನೀಡುತ್ತದೆ.

### ಕ್ಲೇ ಮಾಡೆಲಿಂಗ್

ಎಲ್ಲಾ ಬಣ್ಣದ ಕ್ಲೇ ಕೊಟ್ಟು ಮಕ್ಕಳಿಗೆ ಯಾವುದಾದರೂ ವಿಷಯ ಕೊಡಬೇಕು. ಚಕ್ಕುಲಿ, ಗೊಂಬೆ, ಪ್ರಾಣಿ ಹೀಗೆ ವಿಷಯ ಕೊಟ್ಟಾಗ ಮಕ್ಕಳು ಬೇಗ ಮಾಡೆಲ್ ಮಾಡುತ್ತಾರೆ. ಕ್ಲೇಯೊಂದಿಗೆ ಅಚ್ಚನ್ನು ಕೂಡಾ ಪುಟಾಣಿ ಮಕ್ಕಳಿಗೆ ನೀಡಿದರೆ ಸುಂದರವಾದ ಆಕೃತಿಗಳನ್ನು ಮಾಡುತ್ತಾರೆ. ಖುಷಿಪಡುತ್ತಾರೆ. 10 ಮಕ್ಕಳಿದ್ದರೆ ಸ್ಪರ್ಧೆ ಕೂಡಾ ಏರ್ಪಡಿಸಬಹುದು.

### ಮನೆಯೊಳಗೆ ಕ್ರಿಕೆಟ್

ಮನೆಯಲ್ಲೇ ಸೋಫಾ, ಲೈಟ್ ವೈಟ್ ಬ್ಯಾಟ್, ಬಾಲ್ ಬಳಸಿಕೊಂಡು ಅಮ್ಮ, ಮಗು, ಅಕ್ಕ ತಮ್ಮ ಸೇರಿ ಬ್ಯಾಟು ಬಾಲ್ ನೊಂದಿಗೆ ಆಡುವ ಆಟವೇ ಮನೆಯೊಳಗೆ ಕ್ರಿಕೆಟ್ ಟಿ.ವಿಗೆ ಚೆಂಡು ಬೀಳದಂತೆ ಜಾಗೃತೆ ವಹಿಸಿ ಆಟ ಆಡಬೇಕು. ಮಳೆ ಬರುವಾಗಲೂ ಕ್ರಿಕೆಟ್ ಆಡಬಹುದು.

ಕೇರಂ, ಚೆಸ್ ಕೂಡ ಮಕ್ಕಳಿಗೆ ಹೆಚ್ಚಿನ ಖುಷಿ ಕೊಡುತ್ತದೆ. ಎಲ್ಲಾ ಆಟಗಳೊಂದಿಗೆ ವಾರಕ್ಕೆ ಒಮ್ಮೆಯಾದರೂ ಚೆಸ್ ಆಡಲು ಮರೆಯ ಬಾರದು. ಯಾಕೆಂದರೆ ಅದು ಬುದ್ಧಿಶಕ್ತಿಯನ್ನು ಚುರುಕುಗೊಳಿಸುತ್ತದೆ, ಆಲೋಚನಾ ಶಕ್ತಿಯನ್ನು ವೃದ್ಧಿಸುತ್ತದೆ.

### ಮರಳಿನಲ್ಲಿ ಆಟ

ಮಕ್ಕಳು ಸಾಧಾರಣ 2 ವರ್ಷದಿಂದಲೇ ಮರಳಿನಲ್ಲಿ ಆಡಲು ಪ್ರಾರಂಭಿಸಬಹುದು. ಅದು ಅನಂತರ 60 ವರುಷದವರೆಗೂ ಆಡಬಹುದು. ನಮ್ಮ ಭಾವನೆಗೆ ತಕ್ಕಂತೆ ಮರಳನ್ನು ಬಳಸಿ ಮನೆ, ಗೋಪುರ ಹೀಗೆ ಕಾಲು ಕೈ ಬಳಸಿ ಆಟ ಆಡಬಹುದು. ಅದರ ಮೇಲೆ ಕಪ್ಪೆ ಚಿಪ್ಪುಗಳನ್ನು ಅಂಟಿಸಿ ಅಲಂಕರಿಸಬಹುದು. ಇದು ನಮ್ಮ ಮನಸ್ಸಿಗೆ ಹಿತ ಅನುಭವ ನೀಡುತ್ತದೆ.

ಇವೆಲ್ಲದರ ಜತೆಗೆ ತೆಂಗಿನಕಾಯಿ ಗೆರಟೆಯನ್ನು ಉಪಯೋಗಿಸಿ ಲಗೋರಿ, ಅಡುಗೆ ಆಟ, ಗೂಡು ಕಟ್ಟುವುದು (ಮಣ್ಣಿನಲ್ಲಿ ಮರಳಲ್ಲಿ), ಹಳೆಯ ಮಡಿಕೆಗಳಿಗೆ ವರ್ಣಾಲಂಕಾರ, ಗೋಡೆಯಲ್ಲಿ ಚಿತ್ರ ಬರೆಯುವುದು, ಕಸೂತಿ ಅಂಗಳ ಸ್ವಚ್ಛ ಮಾಡುವುದು, ವಾಹನ ಶುಭ್ರಗೊಳಿಸಲು ಕಲಿಯುವುದು, ಹಳೆಯ ಪುಸ್ತಕಗಳ ಜೋಡಣೆ, ಕಥೆಗಳನ್ನು ಕಟ್ ಮಾಡಿ ಪುಸ್ತಕ ತಯಾರಿಸುವುದು, ಚಿತ್ರಗಳನ್ನು ಸೇರಿಸುವುದು.. ಇದೆಲ್ಲಾ ಮಕ್ಕಳ ಮನೋವಿಕಾಸಕ್ಕೆ ತುಂಬಾ ಹೊಂದಿಕೊಳ್ಳುವ ವಿಚಾರಗಳು.

ಮಕ್ಕಳ ಮನೋದೈಹಿಕ ವಿಕಾಸಕ್ಕೆ ಪೂರಕವಾದ ಒಳಾಂಗಣ ಮತ್ತು ಹೊರಾಂಗಣ ಆಟಗಳು ಮಕ್ಕಳಲ್ಲಿ ಬುದ್ಧಿಮತ್ತೆ ಒರೆಗೆ ಹಚ್ಚುತ್ತವೆ. ಚಿಂತನೆಗೆ ಗ್ರಾಸ ಒದಗಿಸುತ್ತವೆ. ಸೃಜನಶೀಲತೆ ಬೆಳೆಯುತ್ತದೆ. ಆಟದ ಮೂಲಕವೇ ಹೊಸತನ್ನು ಕಲಿಯುವ ಉತ್ಸಾಹ ಇಮ್ಮಡಿಸುತ್ತದೆ. ಈ ಬಗ್ಗೆ ಹೆತ್ತವರು ಗಮನಹರಿಸಿದರೆ ಮಗುವಿನ ಸರ್ವಾಂಗೀಣ ವಿಕಾಸ ಸಾಧ್ಯ.